ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಶ್ರೀಗುರುಚರಿತ್ರೆ ಸಪ್ತಾಹ

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ।

ಗುರುಸ್ಸಾಕ್ಷಾತ್ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥

ಶ್ರೀಗುರುಚರಿತ್ರೆಯು ಒಂದು ಪ್ರಾಸಾದಿಕ ಗ್ರಂಥವಾಗಿದ್ದು, ಭಾವಿಕ ಜನರಿಗೆ ಇದು ಕಾಮಧೇನು, ಕಲ್ಪವೃಕ್ಷಗಳಂತೆ ಫಲಪ್ರದವಾಗಿದೆ. ಸರಸ್ವತೀ ಗಂಗಾಧರ ಸಾಖರೆ ಎಂಬ ಭಕ್ತ ಕವಿಯು ಕ್ರಿ.ಸ. 1500 ರ ಸುಮಾರಿಗೆ ಈ ಚರಿತ್ರೆಯನ್ನು ಮರಾಠೀ ಭಾಷೆಯಲ್ಲಿ ಪದ್ಯ ರೂಪದಲ್ಲಿ ಬರೆದಿದ್ದನೆಂಬುದು ಐತಿಹಾಸಿಕ ಮೂಲಗಳಿಂದ ತಿಳಿದು ಬರುತ್ತದೆ.

ಈ ಗುರುಚರಿತ್ರೆಯೆಂಬ ಗ್ರಂಥ ಪಾರಾಯಣದಿಂದ ಮನುಷ್ಯನಿಗೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳೂ, ಅಷ್ಟಸಿದ್ಧಿಗಳೂ ಲಭ್ಯವಾಗುವುದಲ್ಲದೇ ಅವರ ಜನ್ಮಾಂತರದ ಮಹಾದೋಷಗಳೂ ನಾಶವಾಗಿ ಅವರು ಇಹ ಪರಗಳಲ್ಲಿ ಸೌಖ್ಯ ಹೊಂದುವರೆಂದು ಈ ಗ್ರಂಥದ ಮೂಲ ಲೇಖಕರಾದ ಶ್ರೀ ಸರಸ್ವತೀ ಗಂಗಾಧರರು ಸಾರಿ ಸಾರಿ ಹೇಳಿದ್ದಾರೆ.

## ॥ ಶ್ರೀಗುರುಚರಿತ್ರೆ ಪಾರಾಯಣ ಸಂಕಲ್ಪ ॥

ಶ್ರೀ ಗಣೇಶಾಯ ನಮಃ । ಓಂ ಶ್ರೀ ಕೇಶವಾಯ ನಮಃ । ಓಂ ಶ್ರೀ ನಾರಾಯಣಾಯ ನಮಃ । ಓಂ ಶ್ರೀ ಮಾಧವಾಯ ನಮಃ । ಓಂ ಶ್ರೀ ಗೋವಿಂದಾಯ ನಮಃ । ಓಂ ಶ್ರೀ ವಿಷ್ಣವೇ ನಮಃ । ಓಂ ಶ್ರೀ ಮಧುಸೂದನಾಯ ನಮಃ । ಓಂ ಶ್ರೀ ತ್ರಿವಿಕ್ರಮಾಯ ನಮಃ । ಓಂ ಶ್ರೀ ವಾಮನಾಯ ನಮಃ । ಓಂ ಶ್ರೀ ಶ್ರೀಧರಾಯ ನಮಃ । ಓಂ ಶ್ರೀ ಹೃಷೀಕೇಶಾಯ ನಮಃ । ಓಂ ಶ್ರೀ ಪದ್ಮನಾಭಾಯ ನಮಃ । ಓಂ ಶ್ರೀ ದಾಮೋದರಾಯ ನಮಃ । ಓಂ ಶ್ರೀ ಸಂಕರ್ಷಣಾಯ ನಮಃ । ಓಂ ಶ್ರೀ ವಾಸುದೇವಾಯ ನಮಃ । ಓಂ ಶ್ರೀ ಪ್ರದ್ಯುಮ್ನಾಯ ನಮಃ । ಓಂ ಶ್ರೀ ಅನಿರುದ್ಧಾಯ ನಮಃ । ಓಂ ಶ್ರೀ ಪುರುಷೋತ್ತಮಾಯ ನಮಃ । ಓಂ ಶ್ರೀ ಅಧೋಕ್ಷಜಾಯ ನಮಃ । ಓಂ ಶ್ರೀ ನಾರಸಿಂಹಾಯ ನಮಃ । ಓಂ ಶ್ರೀ ಅಚ್ಯುತಾಯ ನಮಃ । ಓಂ ಶ್ರೀ ಜನಾರ್ಧನಾಯ ನಮಃ । ಓಂ ಶ್ರೀ ಉಪೇಂದ್ರಾಯ ನಮಃ । ಓಂ ಶ್ರೀ ಹರಯೇ ನಮಃ । ಓಂ ಶ್ರೀ ಕೃಷ್ಣಾಯ ನಮಃ ।

ಪ್ರಾಣಾನಾಯಮ್ಯ । ದೇಶಕಾಲೌ ಸಂಕೀರ್ತ್ಯ । ಶ್ರೀಮನ್ಮಹಾಗಣಾಧಿಪತಯೇ ನಮಃ । ಮಾತಾ ಪಿತೃಭ್ಯೋ ನಮಃ । ಸರ್ವೇಭ್ಯೋ ಬ್ರಾಹ್ಮಣೇಭ್ಯೋ ನಮೋ ನಮಃ । ಏತತ್ಕರ್ಮ ಪ್ರಧಾನ ದೇವತಾಭ್ಯೋ ನಮಃ । ಏವಂಗುಣ ವಿಶೇಷಣ ವಿಶಿಷ್ಟಾಯಾಂ, ಶುಭ ಪುಣ್ಯತಿಥೌ, ಮಮ ಆತ್ಮನಃ ಶೃತಿ ಸ್ಮೃತಿ ಪುರಾಣೋಕ್ತ ಫಲಪ್ರಾಪ್ತ್ಯರ್ಥಂ ಅಸ್ಮಾಕಂ ಸಹಕುಟುಂಬಾನಾಂ ಸಪರಿವಾರಾಣಾಂ ದ್ವಿಪದ ಚತುಷ್ಪದ ಸಹಿತಾನಾಂ

ಕ್ಷೇಮಸ್ಥೈರ್ಯಾಯುರಾರೋಗ್ಯ ಐಶ್ವರ್ಯಾಭಿವೃದ್ಧ್ಯರ್ಥಂ, ಶ್ರೀಗುರು ಪ್ರೇರಣಾಯಾ, ಶ್ರೀಪಾದ ಶ್ರೀವಲ್ಲಭ - ಶ್ರೀನೃಸಿಂಹ ಸರಸ್ವತಿ - ಶ್ರೀದತ್ತಾತ್ರೇಯ ಪ್ರೀತ್ಯರ್ಥೇ, ಸಕಲ ಮಂಗಳ ಪ್ರಾಪ್ತ್ಯರ್ಥಂ ಚ ಶ್ರೀಗುರುಚರಿತ್ರ ಸಪ್ತಾಹ ಪಾರಾಯಣಮಹಂ ಕರಿಷ್ಯೇ ।

ಅಖಂಡ ಮಂಡಲಾಕಾರಂ ವ್ಯಾಪ್ತಂ ಯೇನ ಚರಾಚರಂ ।

ತತ್ಪದಂ ದರ್ಶಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥

ಅಸ್ಯ ಶ್ರೀ ಗುರುಚರಿತ್ರ ಸಪ್ತಾಹ ಪಾರಾಯಣ ಮಹಾಮಂತ್ರಸ್ಯ । ಶ್ರೀ ಮಹಾವಿಷ್ಣು ಋಷಿಃ । ಪಂಕ್ತಿ ಛಂದಃ । ಶ್ರೀ ದತ್ತಾತ್ರೇಯೋ ದೇವತಾ । ಓಂ ಹ್ರಾಂ ಬೀಜಂ ಓಂ ಹ್ರೀಂ ಶಕ್ತಿಃ । ಓಂ ಹ್ರೂಂ ಕೀಲಕಂ । ಮಮ ಶ್ರೀಗುರುದತ್ತಾತ್ರೇಯ ಪ್ರೀತ್ಯರ್ಥಂ ಜಪೇ ವಿನಿಯೋಗಃ ।

**॥ ಅಥ ಧ್ಯಾನಂ ॥**

ದತ್ತಾತ್ರೇಯೋ ಮಹಾದೇವೋ ದತ್ತಾತ್ರೇಯೋ ಮಹಾ ಗುರುಃ ।

ದತ್ತಾತ್ರೇಯಾದಿ ವೈಕುಂಠಂ ನಾರಾಯಣಮಹಂ ಭಜೇ ॥

**॥ ಲಮಿತ್ಯಾದಿ ಪಂಚ ಪೂಜಾ ॥**

ಓಂ ಲಂ ಪೃಥಿವ್ಯಾತ್ಮನೇ ಶ್ರೀ ದತ್ತಾತ್ರೇಯಾಯ ನಮಃ ಗಂಧಂ ಪರಿಕಲ್ಪಯಾಮಿ । ಓಂ ಹಂ ಆಕಾಶಾತ್ಮನೇ ಶ್ರೀ ದಿಗಂಬರಾಯ ನಮಃ ಪುಷ್ಪಂ ಪರಿಕಲ್ಪಯಾಮಿ । ಓಂ ಯಂ ವಾಯವಾತ್ಮನೇ ಶ್ರೀ ಅತ್ರಿಪುತ್ರಾಯ ನಮಃ ಧೂಪಂ ಪರಿಕಲ್ಪಯಾಮಿ । ಓಂ ರಂ ತೇಜಾತ್ಮನೇ ಅನಸೂಯಾನಂದನಾಯ ನಮಃ ದೀಪಂ ಪರಿಕಲ್ಪಯಾಮಿ । ಓಂ ವಂ ಅಮೃತಾತ್ಮನೇ ಶ್ರೀದತ್ತಾತ್ರೇಯಾಯ ನಮಃ ಅಮೃತ ನೈವೇದ್ಯಂ ಪರಿಕಲ್ಪಯಾಮಿ । ಓಂ ಸಂ ಸರ್ವಾತ್ಮನೇ ಗುರುನಾಥಾಯ ನಮಃ ತಾಂಬೂಲಾದಿ ಸರ್ವೋಪಚಾರಕಂ ಪರಿಕಲ್ಪಯಾಮಿ । ಅನೇನ ಮಾನಸ ಪೂಜನೇನ ಶ್ರೀ ದತ್ತಾತ್ರೇಯ ಪ್ರೀಯತಾಂ ।

**॥ ಅಥ ಜಪಃ ॥**

ಓಂ ಹ್ರಾಂ ಹ್ರೀಂ ಹ್ರೂಂ ಶ್ರೀ ಗುರುದತ್ತಾತ್ರೇಯಾಯ ನಮಃ ॥ ( 108 )

**॥ ಅಥ ಪ್ರಾರ್ಥನಾ ॥**

ಆನಂದಮಾನಂದಕರ ಪ್ರಸನ್ನಂ ಜ್ಞಾನಸ್ವರೂಪ ನಿಜಬೋಧಯುಕ್ತಂ ।

ಯೋಗೀಂದ್ರಮೀಡ್ಯಂ ಭವರೋಗವೈದ್ಯಂ ಶ್ರೀಸದ್ಗುರುಂ ನಿತ್ಯಮಹಂ ನಮಾಮಿ ॥

ಶ್ರೀ ಗುರುಚರಿತ್ರ ಪ್ರಥಮ, ದ್ವಿತೀಯ, ತೃತೀಯ, ……, ಸಪ್ತಮ ದಿನ ಪಾರಾಯಣಮಹಂ ಕರಿಷ್ಯೇ ।

## ಶ್ರೀಗುರುಚರಿತ್ರೆ ಸಪ್ತಾಹ ಪಾರಾಯಣೆ

| ಅಧ್ಯಾಯ | ದಿನಾಂಕ | ವಿಷಯ |
|---|---|---|
| 1 | 2-12-24 | ಮಂಗಳಾಚರಣೆ, ದೇವತೆಗಳ ಸ್ಮರಣೆ, ಭಕ್ತರಿಗೆ ಗುರು ಮೂರ್ತಿಯ ದರ್ಶನ |
| 2 | 2-12-24 | ಬ್ರಹ್ಮೋತ್ಪತ್ತಿ, ಚತುರ್ಯುಗ ನಿರ್ಮಾಣ |
| 3 | 2-12-24 | ಶ್ರೀಗುರುವು ಅಮರಜಾ ಸಂಗಮದಲ್ಲಿ ತಮ್ಮ ವಾಸಸ್ಥಾನ, ದೂರ್ವಾಸ, ಅಂಬರೀಷರ ಮಹಿಮೆ |
| 4 | 2-12-24 | ತ್ರಿಮೂರ್ತಿಗಳು ಅನುಸೂಯೆಯ ಮಕ್ಕಳಾಗಿದ್ದು |
| 5 | 2-12-24 | ದತ್ತಾತ್ರೇಯನು ಪೀಠಾಪುರದಲ್ಲಿ ಶ್ರೀಪಾದವಲ್ಲಭನೆಂದು ಅವತರಿಸಿದುದು |
| 6 | 2-12-24 | ರಾವಣ ಮಹಾಬಲೇಶ್ವರ ಲಿಂಗಗಳ ವಿಷಯ |
| 7 | 2-12-24 | ಗೋಕರ್ಣ ಮಹಿಮೆ |
| 8 | 2-12-24 | ಆತ್ಮಹತ್ಯೆಗೆ ಸಿದ್ಧರಾದ ತಾಯಿ ಮಕ್ಕಳಿಗೆ ಗುರುಕಥೆ ಹೇಳಿದ್ದು, ಶನಿ ಪ್ರದೋಷ |
| 9 | 2-12-24 | ಅಗಸನಿಗೆ ಅರಸನಾಗಿ ವರವಿತ್ತ ಕಥೆ |
| 10 | 3-12-24 | ಕುರುವರಪುರದ ಸ್ಥಾನ ಮಹಿಮೆ |
| 11 | 3-12-24 | ಶ್ರೀನರಸಿಂಹಸರಸ್ವತಿಗಳು ಅವತರಿಸಿದ ಕಥೆ |
| 12 | 3-12-24 | ತಾಯಿಗೆ ಜ್ಞಾನೋಪದೇಶ, ಸನ್ಯಾಸ ಸ್ವೀಕಾರ |
| 13 | 3-12-24 | ಬ್ರಾಹ್ಮಣನ ಹೊಟ್ಟೆನೋವು ಉಪಶಮನಗೊಳಿಸಿದ್ದು |
| 14 | 3-12-24 | ಯವನರಾಜನಿಗೆ ಶಿಕ್ಷೆ |
| 15 | 3-12-24 | ಶಿಷ್ಯರಿಗೆ ತೀರ್ಥಯಾತ್ರೆಯ ವಿವರ |
| 16 | 3-12-24 | ಬ್ರಾಹ್ಮಣರಿಗೆ ಗುರುಭಕ್ತಿ ಹಾಗೂ ಜ್ಞಾನೋದಯ ದಯಪಾಲಿಸಿದ್ದು |
| 17 | 3-12-24 | ಬ್ರಾಹ್ಮಣಕುಮಾರನಿಗೆ ಕರುಣೆ ತೋರಿದ್ದು |

| | | |
|---|---|---|
| 18 | 3-12-24 | ಚಳ್ಳವರೆಯ ಬಳ್ಳಿ ಕಿತ್ತು ಬ್ರಾಹ್ಮಣನಿಗೆ ದಾರಿದ್ರ್ಯ ದೂರ ಮಾಡಿದ್ದು |
| 19 | 3-12-24 | ಔದುಂಬರ ವರ್ಣನೆ, ಗಾಣಗಾಪುರಕ್ಕೆ ಗಮನ ಮಾಡಿದ ವಿಷಯ |
| 20 | 3-12-24 | ಸ್ತ್ರೀಗೆ ಪಿಶಾಚಬಾಧಾ ನಿವಾರಣೆ, ತೀರಿಕೊಂಡ ಮಗುವಿನ ತಾಯಿಗೆ ಜ್ಞಾನಬೋಧನೆ ಮಾಡಿದ್ದು |
| 21 | 3-12-24 | ಸತ್ತಮಗನಿಗೆ ಗುರುಗಳು ಜೀವದಾನ ಮಾಡಿದ್ದು |
| 22 | 4-12-24 | ಬರಡೆಮ್ಮೆಗೆ ಹಾಲು ಹಿಂಡಿಸಿದ ಪವಾಡ |
| 23 | 4-12-24 | ಬ್ರಹ್ಮರಾಕ್ಷಸನ ಉದ್ಧಾರ, ತ್ರಿವಿಕ್ರಮ ಯತಿಯಿಂದಾದ ಗುರುವಿನ ಸಂದೇಹ ವಿಷಯ |
| 24 | 4-12-24 | ತ್ರಿವಿಕ್ರಮಯತಿಯ ಅಜ್ಞಾನ ನಿವಾರಿಸಿದ್ದು |
| 25 | 4-12-24 | ಗರ್ವಿಷ್ಠ ಬ್ರಾಹ್ಮಣರು ಮ್ಲೇಚ್ಛರೆದುರು ವೇದ ನುಡಿದದ್ದು, ಗುರುಗಳಿಂದ ಗರ್ವಭಂಗ |
| 26 | 4-12-24 | ಬ್ರಾಹ್ಮಣರಿಗೆ ಗುರುಗಳಿಂದ ಹಿತೋಪದೇಶ |
| 27 | 4-12-24 | ಬ್ರಾಹ್ಮಣರಿಗೆ ಬ್ರಹ್ಮರಾಕ್ಷಸರ ಜನ್ಮ ನೀಡಿದ ಪವಾಡ |
| 28 | 4-12-24 | ಪತಿತನಿಗೆ ಮೈಗಂಟಿದ ಭಸ್ಮ ತೊಳೆದು ಮನೆಗೆ ಕಳಿಸಿದ್ದು |
| 29 | 4-12-24 | ಭಸ್ಮ ಪ್ರಭಾವ, ವಾಮದೇವರಿಂದ ರಾಕ್ಷಸರ ಉದ್ಧಾರ |
| 30 | 5-12-24 | ಗಂಡ ಸತ್ತ ಸತಿಗೆ ಜ್ಞಾನೋಪದೇಶ |
| 31 | 5-12-24 | ನಾರಿಗೆ ಸಹಗಮನ, ಪತಿವ್ರತಾ ಧರ್ಮ, ವಿಧವಾ ಧರ್ಮ ವರ್ಣನೆ |
| 32 | 5-12-24 | ಸಹಗಮನಕ್ಕೆ ಸಿದ್ಧಳಾದ ಸತಿಯ ಗಂಡನನ್ನು ಬದುಕಿಸಿದ ಚರಿತ್ರೆ |
| 33 | 5-12-24 | ರುದ್ರಾಕ್ಷಿ ಧಾರಣೆ ಮಾಡಿದ ಕೋಳಿ, ಮಂಗ, ವೈಶ್ಯ, ವೇಶ್ಯೆಯ ಕಥೆ |
| 34 | 5-12-24 | ರುದ್ರಾಕ್ಷಿ ಮಹಿಮೆ, ಮೃತ ರಾಜಕುಮಾರನಿಗೆ ಜೀವದಾನ ಮಾಡಿದ್ದು |

| | | |
|---|---|---|
| 35 | 5-12-24 | ಕಚ ದೇವಯಾನಿಯರ ಕಥೆ, ಸೋಮವಾರ ವ್ರತದ ಕಥೆ |
| 36 | 6-12-24 | ಪರಾನ್ನ ಭಕ್ಷಣೆಗೆ ಆಸೆಪಟ್ಟ ಸ್ತ್ರೀಗೆ ಜ್ಞಾನೋದಯ |
| 37 | 6-12-24 | ಪತಿಯಾದ ಬ್ರಾಹ್ಮಣನಿಗೆ ಬ್ರಾಹ್ಮಣ ಧರ್ಮದ ಉಪದೇಶ |
| 38 | 6-12-24 | ಭಾಸ್ಕರ ಬ್ರಾಹ್ಮಣನಿಂದ ಕೇವಲ ಮೂರು ಜನರಿಗೆ ಉಣ್ಣಲು ಸಾಕಾಗುವಷ್ಟು ಸಾಮಗ್ರಿಯಿಂದ ನಾಲ್ಕುಸಾವಿರ ಬ್ರಾಹ್ಮಣರಿಗೆ ಅನ್ನಸಂತರ್ಪಣೆ ಮಾಡಿಸಿದ್ದು |
| 39 | 7-12-24 | 60 ವರುಷದ ಬಂಜೆ ಮುದುಕಿಗೆ ಪುತ್ರ ಸಂತಾನ |
| 40 | 7-12-24 | ನರಹರಿಗೆ ಕುಷ್ಠರೋಗ ನಿವಾರಣೆ |
| 41 | 7-12-24 | ಈಶ್ವರ ಪಾರ್ವತಿಯರ ಸಂವಾದ ರೂಪದ ಕಾಶಿಯಾತ್ರೆಯ ವರ್ಣನೆ |
| 42 | 7-12-24 | ಸಾಯಂದೇವನು ಹೆಂಡಿರು ಮಕ್ಕಳ ಸಹಿತ ಶ್ರೀಗುರುವನ್ನು ಸ್ತುತಿಸಿದುದು |
| 43 | 7-12-24 | ಅನಂತವ್ರತವನ್ನು ಸಾಯಂದೇವನಿಗೆ ಹೇಳಿದ್ದು |
| 44 | 8-12-24 | ನೇಕಾರ ಭಕ್ತನಿಗೆ ಶ್ರೀಶೈಲ ಪರ್ವತದ ದರ್ಶನ ಮಾಡಿಸಿ, ಶಿವರಾತ್ರಿಯ ಕಥೆ ಹೇಳಿದ್ದು |
| 45 | 8-12-24 | ತುಳಜಾಪುರದ ಕುಷ್ಠರೋಗಿ ಬ್ರಾಹ್ಮಣನಿಗೆ ಸಂಗಮದಲ್ಲಿ ಸ್ನಾನ ಮಾಡಿಸಿ, ರೋಗ ನಿವಾರಿಸಿದ್ದು |
| 46 | 8-12-24 | ಹಿಪ್ಪರಗಿ ಗ್ರಾಮದ ನರಹರಿಯನ್ನು ಶಿಷ್ಯನಾಗಿ ಮಾಡಿಕೊಂಡ ಕಥೆ |
| 47 | 8-12-24 | ದೀಪಾವಳಿ ಹಬ್ಬದ ಸಲುವಾಗಿ ಏಳು ಭಕ್ತರ ಮನೆಯಲ್ಲೂ ಹಾಗೂ ಮಠದಲ್ಲೂ ಇದ್ದು ಎಂಟುರೂಪ ಧರಿಸಿದ್ದು |
| 48 | 8-12-24 | ಶೂದ್ರ ಭಕ್ತನಿಂದ ಜೋಳ ಕೊಯ್ಯಿಸಿ, ನೂರುಮಡಿ ಬೆಳೆ ಕೊಟ್ಟಿದ್ದು |
| 49 | 8-12-24 | ಅಮರಜಾ ಸಂಗಮದ ಮಹಾತ್ಮ್ಯೆ, ರತ್ನಾಬಾಯಿಯ ಕುಷ್ಠರೋಗ ನಿವಾರಣೆ |

| | | |
|---|---|---|
| 50 | 8-12-24 | ಮ್ಲೇಚ್ಛರಾಜನ ಕುರು ಮಾಯಗೊಳಿಸಿ, ಆತನ ನಗರಕ್ಕೆ ಹೋದುದು |
| 51 | 8-12-24 | ಭೂಮಿಯ ಮೇಲಿನ ಪಾಪವೃತ್ತಿ, ಹಲವಾರು ಜನರ ಉಪದ್ರವದಿಂದ ಗುಪ್ತರಾಗಿರುವುದು, ಶಿಷ್ಯರಿಗೆ ಬೋಧನೆ, ಕದಳೀ ವನಕ್ಕೆ ಹೋದದ್ದು |
| 52 | 8-12-24 | ಗುರುಗಳು ಶ್ರೀಶೈಲಕ್ಕೆ ಹೊರಟಿದ್ದು |
| 53 | 8-12-24 | ಅಧ್ಯಾಯಗಳ ವಿವರಣೆ, ಗಾಣಗಾಪುರದಲ್ಲಿ ಗುಪ್ತರೀತಿಯಿಂದ ವಾಸಿಸುತ್ತಿದ್ದು ಸದ್ಭಕ್ತರಿಗೆ ದೃಷ್ಟಾಂತದ ಮೂಲಕ ಸಂದರ್ಶನ |

**ಶ್ರೀಮದ್ದತ್ತಾತ್ರೇಯಾರ್ಪಣಮಸ್ತು ।**

**ಸದ್ಗುರು ಶ್ರೀಪಾದ ಶ್ರೀವಲ್ಲಭ ನರಸಿಂಹ ಸರಸ್ವತೀ ಮಹರಾಜ್ ಕೀ ಜೈ ।**

**ಶ್ರೀಗುರುದತ್ತಾತ್ರೇಯರ ಮಂಗಲಾರತಿ ಹಾಡು :**

ಮಂಗಲಂ ಜಯ ಮಂಗಲಂ ॥ ಪ ॥

ಅತ್ರಿತನಯ ಶ್ರೀದತ್ತನಿಗೆ । ಚಿತ್ರಚರಿತ ಗುರುಮೂರುತಿಗೆ ।
ಧಾತ್ರಿಯ ತಿರುಗುತ ಭಕ್ತರ ಸಲಹುವ । ಸ್ತೋತ್ರಪ್ರಿಯ ದತ್ತಾತ್ರೇಯನಿಗೆ ।
ಮಂಗಲಂ ಜಯ ಮಂಗಲಂ ॥ 1 ॥

ಮೂರುಗುಣಾತ್ಮಕ ಮೂರುತಿಗೆ । ಮೂರುಜಗದಿ ಸಂಚಾರಿಪಗೆ ।
ಧಾರುಣಿಯಲಿ ದುರಿತಾಳಿಯ ಹರಿಸುವ । ವಾರಿಜಮಿತ್ರ ಪ್ರಕಾಶನಿಗೆ ।
ಮಂಗಲಂ ಜಯ ಮಂಗಲಂ ॥ 2 ॥

ಕಲಿಯುಗದಲಿ ಕಲಿಹರಣನಿಗೆ । ಜಲಜಭವಾರ್ಚಿತ ಚರಣನಿಗೆ ।
ಖಳಸಂಹರಣಗೆ ತ್ರೈಮೂರುತಿಗೆ । ತಿಳಿಯಲು ತ್ರಿಗುಣಾತೀತನಿಗೆ ।
ಮಂಗಲಂ ಜಯ ಮಂಗಲಂ ॥ 3 ॥

ವಾಡಿಕ್ಷೇತ್ರನಿವಾಸನಿಗೆ । ರೂಢಿಯ ರಜಕಗೆ ಕೊಟ್ಟವಗೆ ।
ಆಡಿಸಿ ವೇದವ ಪತಿತನ ಮುಖದಿಂ । ಗೂಢವ ಜನರಿಗೆ ತೋರಿದಗೆ ।
ಮಂಗಲಂ ಜಯ ಮಂಗಲಂ ॥ 4 ॥

ಬರಡೆಮ್ಮೆಯ ಹಿಂಡಿಸಿದವಗೆ । ಕೊರಡು ಸತ್ತಿರಲದ ಚಿಗಿಸಿದಗೆ ।
ಶರಣ ತಂತುಕನಿಗೆ ಶ್ರೀಶೈಲವ ಬಹು । ತ್ವರಿತದಿ ತೋರಿಸಿಮೆರೆದವಗೆ ।

ಮಂಗಲಂ ಜಯ ಮಂಗಲಂ ॥ 5 ॥

ಕುಷ್ಠವಹರಿಸಿದ ಮಹಿಮನಿಗೆ । ಇಷ್ಟಾರ್ಥವನೀಯುವ ಗುರುವರಗೆ ।

ಅಷ್ಟ ಸ್ಥಾನದೊಳಷ್ಟ ರೂಪದಿಂ । ದಿಷ್ಟಾರ್ಥವ ತಾನಿತ್ತವಗೆ ।

ಮಂಗಲಂ ಜಯ ಮಂಗಲಂ ॥ 6 ॥

ಔದುಂಬರ ಛಾಯಾಪ್ರಿಯಗೆ । ವೇದಕೆ ತಾಗದ ಲೀಲನಿಗೆ ।

ಮೇದಿನಿಯಲಿ ಗಂಧರ್ವನಗರದಲಿ । ಮೋದದಿ ಲೀಲೆಯ ತೋರಿದಗೆ ।

ಮಂಗಲಂ ಜಯ ಮಂಗಲಂ ॥ 7 ॥

ಬಂಜೆಗೆ ಪುತ್ರರನಿತ್ತವಗೆ । ಕಂಜನಾಭಸೇವಿತ ಪದಗೆ ।

ಭಂಜಿಸಿ ದೈತ್ಯರ ಶಿಷ್ಟರ ಸಲಹುವ । ಮಂಜುಳರೂಪಗೆ ದತ್ತನಿಗೆ ।

ಮಂಗಲಂ ಜಯ ಮಂಗಲಂ ॥ 8 ॥

ಯತಿನರಸಿಂಹಸರಸ್ವತಿಗೆ । ನುತಜನಸೇವಿತ ಚರಣನಿಗೆ ।

ಯತಿವರ ಶ್ರೀಪಾದ ಶ್ರೀವಲ್ಲಭ । ಗತಿಮುದದಿಂ ಮಂಗಲವೆನುವೆ ।

ಮಂಗಲಂ ಜಯ ಮಂಗಲಂ ॥ 9 ॥

ಕೃಷ್ಣಾನದಿತಟವಾಸನಿಗೆ । ವಿಷ್ಣುಶರ್ಮನಿಂ ಸೇವಿತಗೆ ।

ವಿಷ್ಣು ಶಿಷ್ಯನಾ ರಾಘವೇಂದ್ರನಿಗೆ । ಮನ್ನಿಸಿ ಸರ್ವವ ಕೊಡುವವಗೆ ।

ಮಂಗಲಂ ಜಯ ಮಂಗಲಂ ॥ 10 ॥

**॥ ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು ॥**

